ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು–560065

*** ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ ***

ದಿನಾಂಕ: **29-11-2016**

ರಾಮನಗರ ಜಿಲ್ಲೆಗೆ ಸೀಮಿತವಾಗಿದೆ

ಈ ವಾರದ ಮುನ್ಸೂಚನೆ (ದಿನಾಂಕ 30.11.16 ರಿಂದ 4.12.16 ವರೆಗೆ)

ನಿಯತಾಂಕಗಳು	30.11.2016	1.12.2016	2.12.2016	3.12.2016	4.12.2016
ಮಳೆ (ಮಿ ಮಿ)	0	0	10	2	4
ಗರಿಷ್ಠ ಉಷ್ಣಾಂಶ(ಡಿ.ಸೆ.)	30	30	29	28	28
ಕನಿಷ್ಠ ಉಷ್ಣಾಂಶ(ಡಿ.ಸೆ.)	15	15	16	17	18
ವೋಡ (ಪ್ರಮಾಣ)	8	8	8	7	6
ಆರ್ದ್ರತೆ ೭.೨೦ ಬೆ (ಶೇ)	73	74	95	96	97
ಆರ್ದ್ರತೆ ೨.೨೦ ಮ (ಶೇ)	27	36	59	83	67
ಗಾಳಿಯ ವೇಗ(ಕಿ.ಮಿ/ಗಂಟೆಗೆ)	3	8	15	9	9
ಗಾಳಿಯ ದಿಕ್ಕು (ಡಿಗ್ರಿ)	111	190	102	103	94

ಮುಂಬರುವ 5 ದಿನಗಳಲ್ಲಿ ಹಗುರ ಮಳೆ ಆಗುವ ಸಾಧ್ಯತೆಯಿದೆ. ದಿನದ ಗರಿಷ್ಠ ಉಷ್ಣಾಂಶ 28–**30.0^0 ಸೆ** ಮತ್ತು ಕನಿಷ್ಠ **15.0–18.0^0 ಸೆ** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **73–97 %** ಇದ್ದು ಮಧ್ಯಾಹ್ನ **27–83%** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **3–15** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಬೆಳೆಗಳು	ಹವಾಮಾನ ಆಧಾರಿತ ಕೃಷಿ ಸಲಹೆಗಳು
ತೊಗರಿ	➢ ಕಾಯಿ ಕೊರಕದ ಹುಳುವಿನ ಹಟೋಟಿಗೆ ಕ್ಲೋರೋಫೈರಿಫಾಸ್ 20 ಇ.ಸಿ 2 ಮಿ.ಗ್ರಾಂ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಣೆ ಮಾಡಿ ಅಥವಾ ಮ್ಯಾಲಾಥಿಯಾನ್ ಶೇ.೫ ನ್ನು ಧೂಳಿಕರಿಸಿ. ➢ ಗಿಡದಲ್ಲಿ ಬಲಿತಿರುವ ಕಾಯಿಗಳನ್ನು ಕಟಾವು ಮಾಡಿ ಮತ್ತು ಬಿಸಿಲಿನಲ್ಲಿ ಒಣಗಿಸಿ.
ರಾಗಿ	➢ ರಾಗಿಯಲ್ಲಿ ಬೆಂಕಿ ರೋಗ ಕಂಡು ಬಂದಲ್ಲಿ ಮ್ಯಾಂಕೊಜೇಬ್ @ 2 ಗ್ರಾಂ/ಲೀ ಅಥವಾ ಜೇನಾಬ್ @ 2.5 ಗ್ರಾಂ/ಲೀ ಸಿಂಪಡಿಸಿ. ➢ ಬೆಳೆಗಳಿಗೆ ರಕ್ಷಣಾತ್ಮಕ ನೀರಾವರಿಯನ್ನು ಒಂದು ಬಾರಿ ಕೊಡುವುದು.
ಮೆಕ್ಕೆಜೋಳ	➢ ಕಟಾವಿಗೆ ಬಂದಿರುವ ಮೆಕ್ಕೆಜೋಳವನ್ನು ಕಟಾವು, ಒಕ್ಕಣೆ ಮಾಡಿ ಬಿಸಿಲಿನಲ್ಲಿ ಒಣಗಿಸಿ, ಸ್ವಚ್ಚಗೊಳಿಸಿ ಚೀಲದಲ್ಲಿ ಶೇಖರಿಸಿರಿ.
ಶೇಂಗಾ/ನೆಲಗಡಲೆ	➢ ಕಟಾವಾಗಿರುವ ನೆಲಗಡಲೆಯನ್ನು ಬಿಸಿಲಿನಲ್ಲಿ ಒಣಗಿಸಿ, ಸ್ವಚ್ಚಗೊಳಿಸಿ ಚೀಲದಲ್ಲಿ ಶೇಖರಿಸಿರಿ.
ಜಾನುವಾರು	
ಹೈನುಗಾರಿಕೆ	➢ ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು. ➢ ಕೊಟ್ಟಿಗೆಯನ್ನು ಶುಚಿಯಾಗಿ ಇಟ್ಟುಕೊಳ್ಳುವುದು ಮತ್ತು ಜಾನುವಾರುಗಳನ್ನು ಚಳಿಗಾಳಿಯಿಂದ ರಕ್ಷಿಸಬೇಕು.
ರೇಷ್ಮೆ ಸಾಕಾಣಿಕೆ	➢ ಊಜಿನೊಣದಿಂದ ರೇಷ್ಮೆ ಹುಳುವನ್ನು ಸಂರಕ್ಷಿಸಲು ವಿನ್ಯಾಸಗೊಳಿಸಿದ ಊಜಿ ನಿಯಂತ್ರಣ ಬಲೆ ಬಳಸಬೇಕು.

ನೋಡಲ್ ಅಧಿಕಾರಿ:
ಕೃ.ವಿ.ವಿ, ಜಿ.ಕೆ.ವಿ.ಕೆ
ಬೆಂಗಳೂರು